ಹ್ಯಾಂಗಿಂಗ್‌ನಲ್ಲೂ ಡ್ಯಾನ್ಸ್ ಮಾಡುವ ಒಂದು ಹರಳು ಇರುತ್ತದೆ. ಕಿವಿಯಲ್ಲಿ ಯಸ್ ಹುಕ್ ಮಾತ್ರ ಸಾಕು ಎಂದು ಬಯಸುವ ನವ ತರುಣಿಯರಿಗೆ ಬೇಕಾದ ಈಗಿನ ಹೊಸ ಹ್ಯಾಂಗಿಂಗ್ಸ್ ಕೂಡಾ ಲಭ್ಯವಿದೆ. ದೊಡ್ಡದಾದ ಓಲೆ ಆದರೆ ಲೆಹಂಗಾ, ಲಂಗಗಳಿಗೆ ಜೊತೆಯಲ್ಲಿ ಚೂಡಿದಾರಕ್ಕೂ ಸೊಗಸಾಗಿ ಕಾಣುತ್ತದೆ. ಮುಖಕ್ಕೆ ಹೊಸ ಆಕರ್ಷಣೆ ಬರುತ್ತದೆ.

### ನಾಜೂಕಾದ ಕುಸುರಿಯ ಉಂಗುರ

ಹರಳುಗಳನ್ನು ಬಂಗಾರದಲ್ಲಿ ಹಲವು ರೀತಿಯಲ್ಲಿ ಅಳವಡಿಸಲಾಗುತ್ತದೆ. ಇದರಲ್ಲಿ ಚಾನೆಲ್ ಸೆಟ್ಟಿಂಗ್ ಬಹಳ ಹಿತ. ಚುಚ್ಚುವುದಿಲ್ಲ, ಹರಳುಗಳು ಉದುರಿ ಹೋಗುವುದಿಲ್ಲ. ಬದಲಾಗಿ ರೈಲು ಹಳಿಯಂತೆ ಸಾಲಾಗಿ ಇದ್ದು ಬಹಳ ನಾಜೂಕಾಗಿ ಇರುತ್ತದೆ. ನಿತ್ಯ ಬಳಕೆಗೆ ಸೂಕ್ತ, ಹರಳುಗಳೂ ಎದ್ದು ಕಾಣುತ್ತದೆ.

### ಪಾರ್ಟಿವೇರ್ ಹರಳಿನ ನೆಕ್ಲೇಸ್

ರಿಸೆಪ್ಶನ್, ಬರ್ತಡೆ ಪಾರ್ಟಿ, ಔತಣ ಕೂಟಗಳಿಗೆ ಬಹಳ ಸ್ಟೈಲಿಶ್ ಆಗಿ ಹೋಗಬೇಕೆಂದು ನಾರಿ ಬಯಸುತ್ತಾಳೆ. ಪಾರ್ಟಿಗಳಿಗೆ ತೊಡುವ ಆಭರಣಗಳ ವಿನ್ಯಾಸ ಹೇಗಿರಬೇಕೆಂದರೆ ಅಗಲವಾಗಿದ್ದು ದೊಡ್ಡ ದೊಡ್ಡ ಕುಸುರಿಯನ್ನು ಹೊಂದಿದ ವಿನ್ಯಾಸವಿರಬೇಕು. ದೂರದಿಂದಲೇ ಕುತ್ತಿಗೆಯಲ್ಲಿದ್ದ ನೆಕ್ಲೇಸ್ ಮಿನುಗಿ ನೋಡುಗರ ಕಣ್ಣನ ಸೆಳೆಯಬೇಕು. ಅಂತದ್ದೇ ನನಗೂ ಬೇಕು ಎಂದು ನೋಡುಗರಿಗೆ ಅನಿಸಬೇಕು. ಆಗ ತಾನು ತೊಟ್ಟ ಆಭರಣ ಸಾರ್ಥಕತೆ ಪಡೆಯುತ್ತದೆ. ರೋಸ್ ಗೋಲ್ಡ್ ನೆಕ್ಲೇಸ್ ಅದೇ ಲುಕ್ ಕೊಡುತ್ತದೆ. ಕುತ್ತಿಗೆಗೆ ಟೈಟ್ ಆಗಿದ್ದು ಧರಿಸಿ. ಆಗ ಸೆರಗಿನಿಂದ ಆಭರಣ ಮುಚ್ಚಿ ಹೋಗುವುದಿಲ್ಲ!

### ಹಾರಮ್ ನೋಟದ ಸರ

ಹಾರಮ್ ಸಾಧಾರಣವಾಗಿ ಅಗಲವಾದ ವಿನ್ಯಾಸದಿಂದ ಕೂಡಿರುತ್ತದೆ. ಕೆಲವರಿಗೆ ಹಾರಮ್ ಬೇಡ ಆದರೆ ಅದೇ ಲುಕ್ ಬೇಕು. ಫ್ಲೆಕ್ಸಿಬಲ್ ಆಗಿರಬೇಕು. ಆಧುನಿಕ ಬಟ್ಟೆಗಳಿಗೆ ಹೊಂದಬೇಕು ಎನ್ನುವವರಿಗೆ ಈ ಸರವನ್ನು (ರೋಸ್ ಗೋಲ್ಡ್ ಫಿನಿಶ್) ಇಷ್ಟಪಟ್ಟು ತೊಟ್ಟುಕೊಳ್ಳಬಹುದು. ಇಂತಹ ಸರಗಳಿಗೆ 20 ಗ್ರಾಂ ಚಿನ್ನ ಸಾಕು.

### ಕಡಾ ಬಳೆ

ಒಂದು ಗಟ್ಟಿಯಾದ ಉತ್ತಮ ಬಳೆ ತಯಾರಿಸಲು ಅಂದಾಜು 10 ಗ್ರಾಂ ಚಿನ್ನ ಬೇಕು. ಕಡಾದಲ್ಲಿ ಭದ್ರವಾದ ಲಾಕ್ ಇದ್ದು ಹರಳುಗಳು ಬಟ್ಟೆಗೆ ಸಿಲುಕದಂತೆ ಇದೆಯೇ, ನುಣುಪಾಗಿ ಇದೆಯೇ ಎಂದು ನೋಡಿಕೊಳ್ಳಬೇಕು. ದಪ್ಪ ಕೈ ಇರುವವರು ಸ್ವಲ್ಪ ಅಗಲದ ಚಪ್ಪಟೆ ಆಕಾರದ ಬಳೆ, ತೆಳ್ಳಗೆ ಕೈ ಹೊಂದಿದವರು ಪೈಪ್‌ನಂತಹ ಬಳೆ ತೊಡಬಹುದು. ಹರಳುಗಳು ಎದ್ದು ಕಾಣುವ ಬಳೆ ಧರಿಸಿದರೂ ಚಂದ. ಆಭರಣದ ಫಿನಿಶ್ ಹೊಸತಾಗಿರುವುದನ್ನು ಆರಿಸಿ ಧರಿಸಿದರೆ ಹೊಸ ಟ್ರೆಂಡ್ ಎನಿಸಿಕೊಳ್ಳುತ್ತದೆ. ಹಳೆಯ ಆಭರಣಗಳಿಗೆ ಬೇರೆ ಬೇರೆ ಫಿನಿಶನ್ನು ಕೊಟ್ಟು ಹೊಸತಾಗಿ ಮಾರ್ಪಡಿಸಿ ಧರಿಸಬಹುದು.

ಚಿತ್ರಕೃಪೆ: ಮುಳಿಯ ಕೇಶವ ಭಟ್ & ಸನ್ಸ್

# ಸಿಂಪಲ್ ಆಗಿರುವ ಟೆಂಪಲ್ ಒಡವೆ

ಒಡವೆಗಳಲ್ಲಿ ದೇವಾನುದೇವತೆಗಳ ಚಿತ್ರಗಳ ಕುಸುರಿ ಕೆತ್ತನೆ ಇರುವ ವಿನ್ಯಾಸ ಎಂದಿಗೂ ಮಾಸದ ಫ್ಯಾಷನ್ ಟ್ರೆಂಡ್ ಆಗಿದೆ. ಟೆಂಪಲ್ ಜ್ಯುವೆಲ್ಲರಿ ಎಲ್ಲ ವಯೋಮಾನದ ಮಹಿಳೆಯರನ್ನೂ ಆಕರ್ಷಿಸುವ ವಿಶಿಷ್ಟ ಒಡವೆ.

ಮಹಿಳೆಗೂ ಚಿನ್ನಕ್ಕೂ ಎಂದೆಂದೂ ಅನನ್ಯ ನಂಟು, ಬಿಡಿಸಲಾಗದ ಬಾಂಧವ್ಯ, ಅದೇನೋ ಸೆಳೆತ, ವಿಚಿತ್ರವಾದ ವ್ಯಾಮೋಹ. ಚಿನ್ನದೊಡವೆ ಧರಿಸದೇ ಇದ್ದರೂ ತಿಜೋರಿಯಲ್ಲಿ ಚಿನ್ನದ ಓಲೆ, ಬಳೆ, ಸರ, ಪೆಂಡೆಂಟ್, ಬ್ರೇಸ್ಲೆಟ್‌ಗಳ ಸ್ಟಾಕ್ ಇದ್ದೇ ಇರುತ್ತದೆ.

ಮಹಿಳೆಯರ ಆಭರಣ ಮೋಹವನ್ನು ಎನ್‌ಕ್ಯಾಶ್ ಮಾಡಿಕೊಳ್ಳುವವರು ಚಿನ್ನದ ವರ್ತಕರು. ಮಹಿಳೆಯರ ಮನಸ್ಸಿಗೊಪ್ಪುವ ಒಡವೆ ವಿನ್ಯಾಸಗೊಳಿಸಿ ಮಾರುಕಟ್ಟೆಗೆ ತರುತ್ತಾರೆ. ಮದುವೆ ಮುಂಜಿಗಳಂತಹ ಶುಭ ಸಮಾರಂಭಗಳ ಸಂದರ್ಭದಲ್ಲಿ ಧರಿಸಲೆಂದೇ ಮಹಿಳೆಯರು ಒಡವೆಗಳನ್ನು ತೆಗೆದಿರಿಸಿರುತ್ತಾರೆ. ಅವುಗಳಲ್ಲಿ ತಮಿಳುನಾಡಿನ ಸಾಂಪ್ರದಾಯಿಕ ಶೈಲಿಯಲ್ಲಿ ಸಿಂಪಲ್ ಆಗಿರುವ ಟೆಂಪಲ್ ಒಡವೆಗಳೂ ಸೇರಿವೆ.

ಬಾಲಿವುಡ್‌ನ ಬ್ಯೂಟಿಫುಲ್ ನಟಿ ಶ್ರೀದೇವಿ ತಮ್ಮ ಬಳಿ ಕೋಟ್ಯಂತರ ರೂಪಾಯಿ ಬೆಲೆಬಾಳುವ ಟೆಂಪಲ್ ಒಡವೆಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದರು. ಸಾಮಾನ್ಯವಾಗಿ ಹೆಚ್ಚಿನ ನಟಿಯರು ಟೆಂಪಲ್ ಜ್ಯುವೆಲ್ಸ್ ಸೆಳೆತಕ್ಕೆ ಮರುಳಾದವರೇ. ಮದುಮಗಳು ಕೂಡ ಇಂದು ಟೆಂಪಲ್ ಆಭರಣಕ್ಕೆ ಒತ್ತಾಸೆ ಕೊಡುತ್ತಿರುವುದು ಕೂಡ ಈ ವಿನ್ಯಾಸದ ಆಭರಣಗಳಿಗೆ ಜನಪ್ರಿಯತೆ ಹೆಚ್ಚುವಂತಾಗಿದೆ, ಬೇಡಿಕೆ ದುಪ್ಪಟ್ಟು ಆಗುತ್ತಿದೆ.

ತಮಗಿಷ್ಟವಾದ ದೇವಾನುದೇವತೆಗಳ ಚಿತ್ರವಿರುವ ವಿನ್ಯಾಸದ ಪೆಡೆಂಟ್, ನೆಕ್ಲೇಸ್, ಕಿವಿಯೋಲೆ, ಸುಂದರ ಚಿತ್ತಾರಗಳ ಬಳೆಗಳು ಆಭರಣ ಪ್ರಿಯರ ಪ್ರಮುಖ ಆಯ್ಕೆಯಾಗುತ್ತಿದೆ. ತಮ್ಮ ಬಳಿ ಇರುವ ಅಜ್ಜಿಕಾಲದ ಒಡವೆಗಳನ್ನೂ ಆಧುನಿಕ ಸ್ಪರ್ಶದೊಂದಿಗೆ ಟೆಂಪಲ್ ಒಡವೆ ವಿನ್ಯಾಸಗಳಲ್ಲಿಯೇ ಧರಿಸಲು ಹೆಂಗಳೆಯರು ಮುಂದೆ ಬರುತ್ತಿದ್ದಾರೆ.

ಹಬ್ಬ ಹರಿದಿನಗಳಿಗಾಗಿ ಕೆಲವರು ಟೆಂಪಲ್ ಒಡವೆಗಳನ್ನು ಖರೀದಿಸಿಟ್ಟುಕೊಂಡರೆ 'ಚಿನ್ನದ ಹಬ್ಬ'ವಾದ ಅಕ್ಷಯ ತೃತೀಯದಂದು ದೇವರ ಪರಿಕಲ್ಪನೆಯ ಒಡವೆಗಳಿಗೆ ಮೊದಲ ಆದ್ಯತೆ ನೀಡುತ್ತಿದ್ದಾರೆ.

ಉಡುಪುಗಳಲ್ಲಿ ಎಥ್ನಿಕ್ ವೇರ್ ಇರಲಿ, ಸಾಂಪ್ರದಾಯಿಕ ಸೀರೆ, ಲೆಹಂಗಾ, ಸಲ್ವಾರ್‌ಗಳೇ ಇರಲಿ, ಅದಕ್ಕೊಪ್ಪುವ ಒಡವೆ ಬೇಕೆಂದಾಗ ಮಹಿಳೆಯರ ಮೊದಲ ಪ್ರಾಶಸ್ತ್ಯ ಎಂದಿಗೂ ಟೆಂಪಲ್ ಒಡವೆಗಳ ಕಡೆಗೆಯೇ ಎಂಬುದು ಗಮನಾರ್ಹ.

### ಭರತನಾಟ್ಯಕ್ಕೆ ಸೂಕ್ತ

ಟೆಂಪಲ್ ಆಭರಣ ಫ್ಯಾಷನ್ ಟ್ರೆಂಡ್ ಆಗಿದ್ದರೂ ಈ ತರದ ಒಡವೆ ಅತ್ಯಂತ ಸೂಕ್ತವೆನಿಸುವುದು ಭರತನಾಟ್ಯದಂತಹ ಸಾಂಪ್ರದಾಯಿಕ ಕಲೆಯ ಕಾಸ್ಟ್ಯೂಮ್‌ಗೇ. ಭರತನಾಟ್ಯದ ವೇಳೆ ಧರಿಸಿಕೊಳ್ಳುವ ಬೈತಲೆ ಬೊಟ್ಟು, ಸೊಂಟ ಪಟ್ಟಿ, ವಂಕಿ, ಡಾಬು ಎಲ್ಲವೂ ಟೆಂಪಲ್ ಆಭರಣದ್ದೇ ಆಗಿದ್ದರೆ ಸಖತ್ ಲುಕ್ ಕೊಡುತ್ತದೆ. 'ಟ್ರೆಂಡಿಯಾಗಿರುವ ಆಭರಣವೆಂದರೆ ನನಗೆ ಬಹಳ ಇಷ್ಟ. ಶುಭ ಸಮಾರಂಭಗಳಲ್ಲಿ ನಾನು ಚಿನ್ನದ ಒಡವೆಗಳನ್ನೇ ಧರಿಸುವುದು. ಅದರಲ್ಲೂ ಟೆಂಪಲ್ ಆಭರಣವನ್ನೇ ಹೆಚ್ಚಾಗಿ ಪ್ರೀತಿಸುತ್ತೇನೆ' ಎಂದು ಹೇಳುತ್ತಾರೆ ಭರತನಾಟ್ಯ ಕಲಾವಿದೆ ಶ್ರೀಲೇಖಾ. ತನ್ನ ರಂಗಪ್ರವೇಶದ ವೇಳೆ ಟೆಂಪಲ್ ಜ್ಯುವೆಲ್ಲರಿ ತೊಟ್ಟದ್ದನ್ನು ಅನೇಕ ಪ್ರೇಕ್ಷಕರು ಪ್ರಶಂಸಿಸಿದ್ದಾರೆ ಎನ್ನುತ್ತಾರೆ.

ಯುವತಿಯರಿಗೆ ಒಡವೆಗಳೇ ಭೂಷಣ. ಪಾರಂಪರಿಕ ಒಡವೆಗಳಿಗೆ ಎಂದಿಗೂ ಬೆಲೆ ಹೆಚ್ಚು. ಮಿಕ್ಸ್ ಆ್ಯಂಡ್ ಮ್ಯಾಚ್ ಮಾಡಿಕೊಳ್ಳಲು ಕೂಡ ಟೆಂಪಲ್ ಒಡವೆಗಳು ಅತ್ಯಂತ ಸೂಕ್ತವಾದವು.



■ ಯು. ಅನಂತ್